# ಸಾಹಿತ್ಯ ಅಕಾಡಮಿಗೆ ಟಿವಿಯೂ ಕಾಣಬೇಕು



**ಗೋವಿಂದ ಸ್ವಾಮಿ**

ಕಲರ್ಸ್ ಕನ್ನಡದ 'ಶಾಂತಂ ಪಾಪಂ'ನ ಇನ್‌ಸ್ಪೆಕ್ಟರ್

★ *ಅಷ್ಟೆಲ್ಲಾ ಮಾಡಲು ಹೇಗೆ ಸಾಧ್ಯ ಆಗಿದ್ದು?*

ನಟ, ಸಂಘಟಕ, ಹೋರಾಟಗಾರ, ಅಧ್ಯಾಪಕ ಎಲ್ಲಾ ಆಗಿದ್ದೇನೆ. ಅದಕ್ಕೆಲ್ಲಾ ಮೂಲ ಕಾರಣ ರಂಗಭೂಮಿ. ನನ್ನಲ್ಲಿ ನಟನೊಬ್ಬ ಇದ್ದಾನೆ ಎನ್ನುವುದೇ ಗೊತ್ತಿರಲಿಲ್ಲ. ಪಿಯುಸಿ (ವಿಜ್ಞಾನ) ಫೇಲ್ ಆಗಿ ಊರಿನಲ್ಲಿ ದನ ಮೇಯಿಸುತ್ತಿದ್ದೆ. ಒಮ್ಮೆ ನಮ್ಮೂರ ಜಾತ್ರೆಯಲ್ಲಿ ನಮ್ಮೂರ ಗೆಳೆಯನೊಬ್ಬ ಸಿಕ್ಕ. ಬೆಂಗಳೂರಿಗೆ ಬಂದು ಕಲಾ ವಿಭಾಗದಲ್ಲಿ ಪಿಯು ಓದಲು ಸಲಹೆ ನೀಡಿದ. ಉಚಿತ ಹಾಸ್ಟೆಲ್ ಸೌಲಭ್ಯವೂ ಸಿಗುತ್ತೆ ಎನ್ನುವ ಭರವಸೆ ನೀಡಿದ್ದ. ಆ ಸಮಾಧಾನದಲ್ಲಿ ಬಂದು ಸೇರಿದೆ. ಹಾಸ್ಟೆಲ್‌ನ ಸ್ಪರ್ಧೆಯೊಂದರಲ್ಲಿ ಮನಸ್ಸಿಗೆ ತಿಳಿದಂತೆ ಹುಚ್ಚನ ಅಭಿನಯ ಮಾಡಿ ಮೂರನೇ ಬಹುಮಾನ ಪಡೆದೆ. ಅದು ನನ್ನಲ್ಲಿ ನಟನ ಕನಸನ್ನು ಹುಟ್ಟಿಸಿತು. ಬಿಎ (ಐಚ್ಛಿಕ ಕನ್ನಡ, ಪತ್ರಿಕೋದ್ಯಮ, ಇತಿಹಾಸ) ಮುಗಿದ ನಂತರ ಡಿಡಿಎಂ (ನಾಟಕ, ನೃತ್ಯ, ಸಂಗೀತ), ಮತ್ತೊಂದು ಬಿಎ ಮಾಡಿ ಅದೇ ವಿಷಯದಲ್ಲಿ ಎಂಎ ಮಾಡಿದೆ. ನಂತರ ಪತ್ರಿಕೋದ್ಯಮ ಎಂಎ ಕೂಡ ಮಾಡಿದೆ. ಅಷ್ಟರಲ್ಲಿ ರಂಗಭೂಮಿಯಲ್ಲಿ ತೊಡಗಿದ್ದೆ. ನಟ, ನಿರ್ದೇಶಕ, ನಾಟಕಕಾರನಾಗಿ ಗುರುತಿಸಿಕೊಂಡೆ. ಸಾಕಷ್ಟು ನಾಟಕ, ಸಿನಿಮಾ, ಧಾರಾವಾಹಿಗಳಲ್ಲಿಯೂ ನಟಿಸಿದ್ದೇನೆ. ವೃತ್ತಿಯಿಂದ ಅಧ್ಯಾಪಕನಾಗಿದ್ದೇನೆ. ಬುಡಕಟ್ಟು ಸಮುದಾಯದ ಸಂಘಟನೆ, ಸಂಶೋಧನೆಯಲ್ಲಿ ತೊಡಗಿದ್ದೇನೆ.

★ *ನಿಮ್ಮ ಪೊಲೀಸ್‌ಗಿರಿ ಹೇಗಿದೆ?*

ನನ್ನನ್ನು ನೋಡಿದ ಪೊಲೀಸ್ ಅಧಿಕಾರಿಗಳು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. 'ಹಾವ– ಭಾವ, ಭಂಗಿ ಎಲ್ಲಾ ಪಕ್ಕಾ ಪೊಲೀಸ್ ಅಧಿಕಾರಿಯಂತೆ ಮಾಡುತ್ತೀರಿ' ಎನ್ನುವ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಇಂತಹ ಸಾಕಷ್ಟು ಪಾತ್ರಗಳನ್ನು ಮಾಡಿದ್ದರಿಂದ ಅದರಲ್ಲಿ ಹೆಚ್ಚುಗಾರಿಕೆ ಏನಿಲ್ಲ. ಬರಗೂರು ರಾಮಚಂದ್ರಪ್ಪ ಅವರ 'ಕರಡಿಪುರ' ಸಿನಿಮಾಕ್ಕೆ ನಾಯಕ ನಟನಾಗಿ ಆಯ್ಕೆಯಾಗಿದ್ದೆ. ಅಲ್ಲಿ ತೊಡಗಿದ್ದರೆ ದೊಡ್ಡ ನಟನಾಗಿ ಅದೇ ವೃತ್ತಿಯಾಗುತ್ತಿತ್ತೋ ಏನೋ ಗೊತ್ತಿಲ್ಲ. ಬೇರೆ ಬೇರೆ ಕೆಲಸದ ಒತ್ತಡಗಳ ಕಾರಣ ಆ ಅವಕಾಶವನ್ನು ಬಿಟ್ಟಿದ್ದೆ. ಈಗ ಮೆಗಾ ಧಾರಾವಾಹಿಗಳಲ್ಲಿ ದೊಡ್ಡ ಪಾತ್ರಗಳು ಸಿಗುತ್ತವೆ. ಅಷ್ಟು ಸಮಯ ನನ್ನಲ್ಲಿ ಇಲ್ಲದ ಕಾರಣ ಚಿಕ್ಕ ಪುಟ್ಟ ಪಾತ್ರಗಳನ್ನು ನಿರ್ವಹಿಸುತ್ತಿದ್ದೇನೆ.

★ *ಟಿವಿ ಕಥೆಗಳೇಕೆ ಒಂದೇ ರೀತಿ ಇರುತ್ತವೆ. ಲೇಖಕರ ಕೊರತೆ ಇದೆ ಎಂದು ಅನ್ನಿಸುತ್ತಾ?*

ಕೌಟುಂಬಿಕ ಅನ್ಯೋನ್ಯತೆಯನ್ನು ಬಿಂಬಿಸುವ ಕಥೆಗಳು ಬರುತ್ತಿಲ್ಲ. ಅದಕ್ಕಿಂತ ಗೊಂದಲ, ಮತ್ಸರದ ಕಥೆಗಳು ಕುತೂಹಲ ಹುಟ್ಟಿಸುತ್ತವೆ ಎಂಬ ಭ್ರಮೆಯ ಕಾರಣಕ್ಕೆ ಪುನರಾವರ್ತಿತವಾಗುತ್ತಿವೆ ಎಂದು ನನಗೆ ಅನ್ನಿಸುತ್ತಿದೆ. ಇದಕ್ಕಿಂತ ಮುಖ್ಯವಾಗಿ ಧಾರಾವಾಹಿಗಳು ಆರೋಗ್ಯವನ್ನೂ ಒಳಗೊಂಡಂತೆ, ಆಹಾರ ವೈವಿಧ್ಯ, ಸಂಸ್ಕೃತಿ, ಜೀವನ ವಿಧಾನ ತೋರಿಸಲು ಸಾಧ್ಯವಿದೆ. ಜನರಲ್ಲಿ ಜಾಗೃತಿ ಮೂಡಿಸಬೇಕಾದ ಹಲವಾರು ವಿಷಯಗಳಿವೆ. ಆದರೆ ಜನ ಅದನ್ನು ತಿರಸ್ಕರಿಸುತ್ತಾರೆ ಎನ್ನುವ ಕಲ್ಪನೆ ಹೊಸ ಪ್ರಯೋಗಕ್ಕೆ ಹಿಂದೇಟು ಹಾಕುವಂತೆ ಮಾಡುತ್ತಿದೆ ಎಂದು ನಾನು ಭಾವಿಸಿದ್ದೇನೆ.

★ *ಟಿವಿ ಸಾಹಿತ್ಯದ ಬಗ್ಗೆ ನಿಮ್ಮ ನಿಲುವೇನು?*

ರಂಗಭೂಮಿಯಲ್ಲಿ ತೊಡಗಿದ್ದರೂ, ಮೂಲತಃ ಸಾಹಿತ್ಯ ವಿದ್ಯಾರ್ಥಿ. ಸಿನಿಮಾ ಅಕಾಡೆಮಿ ಸಂಸ್ಥಾಪನೆಯ ಸಂದರ್ಭದಲ್ಲಿಯೂ ನಾಗಾಭರಣ, ಅಬ್ದುಲ್ ರೆಹಮಾನ್ ಪಾಷ ಅವರ ಜೊತೆ ಒಂದಿಷ್ಟು ಕೆಲಸ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಸಿನಿಮಾ ಮತ್ತು ಟಿವಿ ಕಥೆಗಳನ್ನು ಸಾಹಿತ್ಯ ಎಂದು ಪರಿಗಣಿಸಬೇಕು. ಶೈಕ್ಷಣಿಕ ಸಾಹಿತ್ಯದ ಆಚೆಗೂ ಸಾಹಿತ್ಯ ಇರುವ ಸತ್ಯವನ್ನು ತಡವಾಗಿ ಅರಿತಿದ್ದೇವೆ. ಅದರ ಅಧ್ಯಯನಕ್ಕೂ ವಿದೇಶಿ ವಿದ್ವಾಂಸರೇ ಶಿಸ್ತು ಬದ್ಧ ಮಾರ್ಗಸೂಚಿ ಹಾಕಿಕೊಟ್ಟರು. ಈಗ ತೆರೆಯ ಮೇಲಿನ ಸಾಹಿತ್ಯವನ್ನೂ ಗಂಭೀರವಾಗಿ ಮೌಲ್ಯಮಾಪನ ಮಾಡಬೇಕು. ತೆರೆಯ ಸಾಹಿತಿಗಳನ್ನೂ ಪುರಸ್ಕರಿಸಲು ಸಾಹಿತ್ಯ ಅಕಾಡಮಿ ಮುಂದಾಗಬೇಕು.

■ **ರಾಘವೇಂದ್ರ**